ಶೈಕ್ಷಣಿಕ ಗುಣಮಟ್ಟದಿಂದ ಉತ್ತಮ ಸಮಾಜ

ಬೆಂಗಳೂರು: ಜನ್ಮದಿಂದ ಬಂದ ಸೂತಕ ಗಳನ್ನು ಬಿಟ್ಟು ಸಮುದಾಯದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಪ್ರಬಲವಾಗಬೇಕು. ಆಗ ಮಾತ್ರ ಉತ್ತಮ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ರಾಜೇಂದ್ರ ಚಿನ್ನಿ ತಿಳಿಸಿದ್ದಾರೆ.

ಗುರುವಾರ ನಗರದ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿ ಸಂಘ ಮತ್ತು ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಮಹಾನ್ ಮಾನವತವಾದಿ ಅಂಬೇಡ್ಕರ್ ರವರ ಜನ್ಮ ದಿನಾಚರಣೆ-ಭೀಮೋತ್ಸವ ಕಾರ್ಯ ಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್‌ರವರು ಯಾವುದೇ ಜಾತಿ, ಪಂಗಡ, ಪ್ರಾಂತ್ಯಕ್ಕೆ ಸೀಮಿತರಲ್ಲ, ಸಂವಿಧಾನದ ರಚನೆಗೆ ಸೀಮಿತವಾಗದೆ ಮಹಿಳೆಯರ ಹೆರಿಗೆಯ ರಜಾ ಅವಧಿ, ಕಾರ್ಖಾನೆಗಳ ಕೆಲಸದ ಅವಧಿಗೆ



ಶ್ರಮಿಸಿದ್ದಾರೆ. ಜನ್ಮದಿಂದ ಬಂದ ಸೂತಕಗಳನ್ನು ಬಿಟ್ಟು ಸಮುದಾಯದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಪ್ರಬಲವಾಗಬೇಕು ಆಗ ಮಾತ್ರ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕರ್ನಾಟಕದ ದಲಿತ್ ಇಂಡಿಯನ್ ಚೇಂಬರ್ ಆಫ್ ಕಾರ್ಮಸ್ ಅಂಡ್ ಇಂಡಸ್ಟ್ರೀ ಅಧ್ಯಕ್ಷ ಡಾ.ರಾಜ ನಾಯಕ್ 2023ರ ಕೃಷಿ ವಿಶ್ವವಿದ್ಯಾನಿಲಯದಿಂದ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಅವರು, ಯುವಜನತೆ ಕೆಲಸ ನೀಡುವವರಾಗಬೇಕೆ ಹೊರತು ಪಡೆಯುವವರಾಗಬಾರದು ಎಂದರು.

ಈ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ಕುಲಸಚಿವ ಡಾ. ಬಸವೇಗೌಡ, ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್.ಮಧುಪ್ರಸಾದ್ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

Hosadigantha Pg-10

ವಾರ್ತಾ ಭಾರತಿ

ಬೆಂಗಳೂರು, ಶುಕ್ರವಾರ, ಜೂನ್ 2, 2023

'ಆಧುನಿಕ ಭಾರತ ನಿರ್ಮಾಣದಲ್ಲಿ ಡಾ.ಅಂಬೇಡ್ಕರ್ ಪಾತ್ರ ಅಪಾರ'

ಬೆಂಗಳೂರು, ಜೂ.1: ಆಧುನಿಕ ಭಾರತ ನಿರ್ಮಾಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪಾತ್ರ ಅಪಾರವಾಗಿದ್ದು, ಭೀಮೋತ್ಸವ ದಿನಾಚರಣೆಯು ಅವರಿಗೆ ತೋರಿಸುವ ಕೃತಜ್ಞತೆಯಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ರಾಜೇಂದ್ರ ಚಿನ್ನಿ ತಿಳಿಸಿದ್ದಾರೆ.

ಗುರುವಾರ ನಗರದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ಸಂಘ ಮತ್ತು ನೌಕರರ ಸಂಘದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಮಹಾನ್ ಮಾನವತವಾದಿ 'ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ-ಭೀಮೋತ್ಸವ-2023'ನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಮೂಲ ಅವಶ್ಯವೆಂದರೆ



ಸಮಾನ ಸಮಾಜದ ರಚನೆ, ಜೀವನ ಪದ್ಧತಿಯಾಗಿದೆ. ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು ಜನಸಾಮಾನ್ಯರಿಗೆ ಪೂರಕವಾಗುವಂತೆ ತಲುಪಿಸುವುದು ಅತ್ಯವಶ್ಯಕ ಎಂದರು.

ಕಾರ್ಯಕ್ರಮದಲ್ಲಿ ದಲಿತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ಡಾ. ರಾಜ ನಾಯಕ್, ವಿವಿಯ ಕುಲಪತಿ ಡಾ.ಎಸ್. ವಿ.ಸುರೇಶ ಮಾತನಾಡಿದದರು.

ಈ ಸಂದರ್ಭದಲ್ಲಿ ಡಾ.ಕೆ.ಸಿ. ನಾರಾಯಣಸ್ವಾಮಿ, ಕುಲಸಚಿವ ಡಾ.ಬಸವೇಗೌಡ ಸೇರಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಸಂಘ ಹಾಗೂ ಇತರೆ ಅಧಿಕಾರಿಗಳು ಹಾಜರಿದ್ದರು.

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವುದೇ ಸಮಸ್ಯೆ | ಸರದಿಯಲ್ಲಿ ನಿಂತು ಹೈರಾಣಾಗುತ್ತಿರುವ ರೈತರು

ದಾಸ್ತಾನಿದ್ದರೂ ಸಿಗುತ್ತಿಲ್ಲ ಬಿತ್ತನೆ ಬೀಜ

■ ರವಿಕುಮಾರ ಬಿಟ್ಟಪುರ ಬೆಂಗಳೂರು
ravi.kumar6@timesgroup.com

ರಾಜ್ಯದಲ್ಲಿ ಉತ್ತಮ ಮಳೆಯಾಗಿರುವುದರಿಂದ ಮುಂಗಾರು ಪ್ರಾರಂಭದಲ್ಲೇ ಜಮೀನು ಹದಗೊಳಿಸಿರುವ ರೈತರಿಗೆ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ದೊರೆಯದಿರುವುದು ಬಿತ್ತನೆ ಕಾರ್ಯಕ್ಕೆ ಹಿನ್ನಡೆಯಾಗಿದೆ.

ರಾಜ್ಯಕ್ಕೆ ಮುಂಗಾರು ಆಗಮಿಸುವ ಮುನ್ನವೇ ಕೃಷಿ ಇಲಾಖೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ನೀಡಲು ಸಿದ್ಧತೆ ನಡೆಸಿತ್ತು. ರಾಜ್ಯದ ಪ್ರತಿಯೊಂದು ರೈತ ಸಂಪರ್ಕ ಕೇಂದ್ರದಲ್ಲಿ 'ಕ್ಯೂಆರ್ ಕೋಡ್' ಸ್ಕ್ಯಾನ್ ಮಾಡುವ ಮೂಲಕ ಬಿತ್ತನೆ ಬೀಜ ವಿತರಿಸಬೇಕು ಎಂದು ಆದೇಶ ಹೊರಡಿಸಿತ್ತು. ಆದರೆ, ತಾಂತ್ರಿಕ ಸಮಸ್ಯೆಯಿಂದಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಆಗದೇ ಬಿತ್ತನೆ ಬೀಜ ವಿತರಿಸಲಾಗುತ್ತಿಲ್ಲ. ದಿನವಿಡೀ ಸರತಿ ಸಾಲಿನಲ್ಲಿ ನಿಂತರೂ ಬಿತ್ತನೆ ಬೀಜ ದೊರೆಯದಿರುವುದಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಜ್ಜಾಗದ ರೈತ ಸಂಪರ್ಕ ಕೇಂದ್ರಗಳು

ರಾಜ್ಯದ ಪ್ರತಿ ಹೋಬಳಿ ಮಟ್ಟದಲ್ಲೂ ರೈತ ಸಂಪರ್ಕ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ ಅಗತ್ಯ ವಿದ್ಯುತ್, ಕಂಪ್ಯೂಟರ್, ಯುಪಿಎಸ್ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಇದರ ನಡುವೆ ಸರ್ವರ್ ಸಮಸ್ಯೆ ಕೂಡ ತಲೆದೋರಿದೆ. ಹೀಗಾಗಿ, ಪದೇಪದೆ ವಿದ್ಯುತ್ ಕಡಿತವಾಗುತ್ತಿರುವುದರಿಂದ (ಲೋಡ್ ಶೆಡ್ಡಿಂಗ್) ಸ್ಕ್ಯಾನ್ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದು



ರೈತ ಸಂಪರ್ಕ ಸಿಬ್ಬಂದಿಗಳ ಅಳಲಾಗಿದೆ.

ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲೂ ಬಿತ್ತನೆ ಬೀಜದ ಲಭ್ಯತೆ ಮತ್ತು ಅವುಗಳ ದರಪಟ್ಟಿ ಫಲಕವನ್ನು ಹಾಕಬೇಕು. ಆದರೆ, ಬಹುತೇಕ ಕೇಂದ್ರಗಳಲ್ಲಿ ಬಿತ್ತನೆ ಬೀಜದ ದರಪಟ್ಟಿ ಫಲಕ ಹಾಕಿಲ್ಲ. ಎಷ್ಟು ದರವಿದೆ ಎಂಬುದರ ಬಗ್ಗೆ ಅಧಿಕಾರಿಗಳು ರೈತರಿಗೆ ಮಾಹಿತಿ ನೀಡುತ್ತಿಲ್ಲ. ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲಿ 500 ಮಂದಿ ರೈತರಿಗೆ ಬಿತ್ತನೆ ಬೀಜ ನೀಡಬೇಕು ಎಂಬ ನಿಯಮವಿದ್ದರೂ, ಕೇವಲ 100-150 ಮಂದಿಗೆ ಮಾರಾಟ ಮಾಡುತ್ತಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ನೆಪ ಹೇಳಿ ಕೇಂದ್ರದಲ್ಲಿರುವ ಸೂರ್ಯಕಾಂತಿ, ಜೋಳ, ಕಡಲೆಕಾಯಿ, ಹಲಸಂದೆ ಬೀಜಗಳನ್ನು ಮನೆಗೆ ಕೊಂಡೊಯ್ದು ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಚಾಮರಾಜನಗರ, ಮೈಸೂರು, ಬಳ್ಳಾರಿ ಹಾಗೂ



ರೈತ ಸಂಪರ್ಕ ಕೇಂದ್ರಗಳಲ್ಲಿ ರಾಜಕಾರಣಿಗಳ ಹಿಂಬಾಲಕರು, ಮುಖಂಡರಿಗೆ ಬಿತ್ತನೆ ಬೀಜ ದೊರೆಯುತ್ತದೆ. ನೈಜ ರೈತರಿಗೆ ಖಾಲಿಯಾಗಿದೆ ಎಂದು ನೆಪ ಹೇಳಿ ವಾಪಸ್ ಕಳುಹಿಸಲಾಗುತ್ತಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿರುವ ಬಿತ್ತನೆ ಬೀಜಗಳು ಮಧ್ಯವರ್ತಿಗಳಿಂದ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ನೂರಾರು ನಿದರ್ಶನಗಳನ್ನು ಕಣ್ಣಾರೆ ನೋಡಿದ್ದೇನೆ. ಇದಕ್ಕೆ ಕಡಿವಾಣ ಹಾಕಬೇಕು.

-ಕುರುಬೂರು ಶಾಂತಕುಮಾರ್
ಅಧ್ಯಕ್ಷ, ರಾಜ್ಯ ರೈತ ಸಂಘ

ಕ್ಯೂಆರ್ ಕೋಡ್ ಕೆಲವು ಕಡೆಗಳಲ್ಲಿ ಕೈ ಕೊಟ್ಟಿದೆ. ಅಂತಹ ಕಡೆ ಬಿತ್ತನೆ ಬೀಜದ ವಿವರ ಹಾಗೂ ಬಾರ್ ಕೋಡ್ ಸಂಖ್ಯೆಯನ್ನು ಬರೆದುಕೊಂಡು ವಿತರಣೆ ಮಾಡುವಂತೆ ಸೂಚಿಸಲಾಗಿದೆ. ಅಕ್ರಮವಾಗಿ ಮಾರಾಟವಾಗುತ್ತಿದ್ದರೆ ಸಂಬಂಧಪಟ್ಟ ಜಿಲ್ಲೆ ಜಂಟಿ ನಿರ್ದೇಶಕರು, ಜಾಗೃತ ಕೋಶ ದಳದ ನಿರ್ದೇಶಕರಿಗೆ ರೈತರು ದೂರು ನೀಡಬಹುದು.

-ಡಾ. ಜೆ.ಟಿ. ಪುತ್ರ
ಕೃಷಿ ಇಲಾಖೆ ನಿರ್ದೇಶಕ

ಕಲಬುರಗಿ ಜಿಲ್ಲೆಗಳಲ್ಲಿ ಎಗ್ಗಿಲ್ಲದೇ ಅಕ್ರಮ ಮಾರಾಟ ನಡೆಯುತ್ತಿದೆ. ಅದರ ದಾಖಲೆಗಳನ್ನು ತಡವಾಗಿ ಕಂಪ್ಯೂಟರ್‌ನಲ್ಲಿ ನಮೂದಿಸಲಾಗುತ್ತಿದೆ. ಇದಕ್ಕೆ ತಾಲೂಕು ಮತ್ತು ಜಿಲ್ಲಾ ಮಟ್ಟದ ಕೆಲವು ಅಧಿಕಾರಿಗಳ ಸಹಕಾರವಿದೆ ಎಂದು ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ಆರೋಪಿಸಿದ್ದಾರೆ.

ಕಾಳಸಂತೆ ತಡೆಗಟ್ಟಲು ಕ್ಯೂಆರ್ ಕೋಡ್

ರೈತ ಸಂಪರ್ಕ ಕೇಂದ್ರಗಳಿಗೆ ಬರುವ ಬಿತ್ತನೆ ಬೀಜಗಳನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವುದಕ್ಕೆ ಕಡಿವಾಣ ಹಾಕಲೆಂದೇ ಈ ಹಿಂದಿನ ಕೃಷಿ ಸಚಿವರು ಕ್ಯೂಆರ್ ಕೋಡ್ ವ್ಯವಸ್ಥೆ ಜಾರಿಗೆ ತಂದಿದ್ದರು. ಇದನ್ನು ರಾಜ್ಯದ ಎಲ್ಲ ಕೃಷಿ ಸಂಪರ್ಕ ಕೇಂದ್ರಗಳಲ್ಲೂ ಅಳವಡಿಸಲಾಯಿತು. ಆದರೆ, ಯಾವುದೋ ಕುಂಟು ನೆಪ ಹೇಳಿ ಭೌತಿಕವಾಗಿ ಹಂಚುತ್ತೇವೆ ಎಂದು ಹೇಳಿ ಕಾಳಸಂತೆಕೋರರಿಗೆ ಸಹಕಾರ ನೀಡುತ್ತಿರುವ ಕೆಲವು ಅಧಿಕಾರಿಗಳಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಹೆಸರು ಹೇಳಲು ಇಚ್ಛಿಸದ ಕೃಷಿ ಅಧಿಕಾರಿಯೊಬ್ಬರು ಹೇಳಿದರು.

Vijayakarnataka Pg-11

ಆರ್ಥಿಕ ಸಂಕಷ್ಟ: ₹32 ಕೋಟಿ ಸಾಲಕ್ಕೆ ಹಾಪ್‌ಕಾಮ್ಸ್ ಪ್ರಸ್ತಾವ

ಬಡ್ಡಿರಹಿತ, ಬಡ್ಡಿ ಸಹಿತ ಸಾಲ ನೀಡುವಂತೆ ಸರ್ಕಾರಕ್ಕೆ ಮನವಿ

• ಸಂಪತ್ ತರೀಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಸಂಸ್ಥೆಯ ಪುನಶ್ಚೇತನಕ್ಕೆ ₹12 ಕೋಟಿಗಳನ್ನು ಬಡ್ಡಿ ಸಹಿತ ಮತ್ತು ₹20 ಕೋಟಿಗಳನ್ನು ಬಡ್ಡಿ ರಹಿತ ಸಾಲವಾಗಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹಾಪ್‌ಕಾಮ್ಸ್ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ.

ಹಾಪ್‌ಕಾಮ್ಸ್ ಸಂಸ್ಥೆಗೆ ಅಗತ್ಯಕ್ಕಿಂತ ಹೆಚ್ಚಾಗಿರುವ ಸಿಬ್ಬಂದಿ ಸಮಸ್ಯೆಯಿದೆ. ಈ ನಡುವೆ ನಿವೃತ್ತರಾಗುತ್ತಿರುವವರ ಸಂಖ್ಯೆಯು ಹೆಚ್ಚಾಗಿದ್ದು, ನಿವೃತ್ತ ಸಿಬ್ಬಂದಿಗೆ ಗ್ರಾಚ್ಯುಟಿ ಕೊಡಲು ಸಹ ಪರದಾಡುವಂತ ಪರಿಸ್ಥಿತಿ ಸಂಸ್ಥೆಯಲ್ಲಿದೆ. ಹೀಗಾಗಿ ಈ ಪ್ರಸ್ತಾವನೆ ಸಲ್ಲಿಸಲು ಚಿಂತನೆ ನಡೆಸಿದೆ.

ಹಾಪ್‌ಕಾಮ್ಸ್ ಮಾಹಿತಿಯಂತೆ 2019ರಿಂದ ಈವರೆಗೆ ನಿವೃತ್ತರಾಗಿರುವ 130ಕ್ಕಿಂತ ಹೆಚ್ಚು ಸಿಬ್ಬಂದಿ ಸುಮಾರು 6ರಿಂದ 7 ಕೋಟಿ ರು. ಗ್ರಾಚ್ಯುಟಿ ಹಣ ಕೊಡಬೇಕಿದ್ದು, ಅದಕ್ಕಾಗಿ ಸರ್ಕಾರದ ಆರ್ಥಿಕ ನೆರವಿನ ಅಗತ್ಯವಿದೆ. ಜೊತೆಗೆ ಪ್ರತಿ ತಿಂಗಳು 6ರಿಂದ 8ರಂತೆ ವರ್ಷಕ್ಕೆ 70ರಿಂದ 80 ಸಿಬ್ಬಂದಿ ನಿವೃತ್ತರಾಗುತ್ತಿದ್ದಾರೆ. ಹೀಗಾಗಿ ಈ ವರ್ಷದ ಅಂತ್ಯದೊಳಗೆ ನಿವೃತ್ತರಿಗೆ ಕೊಡಬೇಕಾದ ಗ್ರಾಚ್ಯುಟಿ ಹಣದ ಮೊತ್ತವೇ 10 ಕೋಟಿ ರು.ಗಳಿಗೂ ಹೆಚ್ಚಾಗಲಿದೆ.

ಸದ್ಯಕ್ಕೆ ಹಾಪ್‌ಕಾಪ್ಸ್ ವ್ಯಾಪಾರ, ವಹಿವಾಟಿನಿಂದ ಬರುತ್ತಿರುವ ಆದಾಯದಲ್ಲಿ ಸಿಬ್ಬಂದಿಗಳ ಸಂಬಳ, ಕಚೇರಿ ನಿರ್ವಹಣೆ ಸೇರಿದಂತೆ ಮತ್ತಿತರರ ವೆಚ್ಚಗಳನ್ನಷ್ಟೇ ಸರಿದೂಗಿಸಬಹುದು. ಆದರೆ, ನಿವೃತ್ತರಾಗುತ್ತಿರುವಂತೆ ಸಿಬ್ಬಂದಿಗಳಿಗೆ ಗ್ರಾಚ್ಯುಟಿ ಸೇರಿದಂತೆ ಮತ್ತಿತರರ ಸೌಲಭ್ಯಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅನಿವಾರ್ಯವಾಗಿ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯಬೇಕಿದ್ದು, ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಹಾಪ್‌ಕಾಮ್ಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಸಚಿವರ ಭರವಸೆ: ಕಳೆದ ವರ್ಷವೇ ರಾಜ್ಯ ಸರ್ಕಾರಕ್ಕೆ 12 ಕೋಟಿ ರು.ಗಳನ್ನು ಬಡ್ಡಿ ಸಹಿತ ಸಾಲವಾಗಿ ಮತ್ತು 20 ಕೋಟಿ ರು.ಗಳನ್ನು ಬಡ್ಡಿರಹಿತ ಸಾಲವಾಗಿ ಕೊಡುವಂತೆ ಹಾಪ್‌ಕಾಮ್ಸ್ ಆಡಳಿತ ಮಂಡಳಿ ಮನವಿ ಸಲ್ಲಿಸಿತ್ತು. ಇದಕ್ಕೆ ಸರ್ಕಾರ ಕೂಡ ಒಪ್ಪಿಗೆ ಸೂಚಿಸಿತ್ತು. ಈ ನಡುವೆ ಚುನಾವಣಾ ಮಾದರಿ ನೀತಿ ಸಂಹಿತಿ ಜಾರಿಯಾದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಗೆ ಹಿನ್ನಡೆಯಾಗಿತ್ತು. ಇದೀಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಹಾಪ್‌ಕಾಮ್ಸ್ ಆರ್ಥಿಕ ಸಂಕಷ್ಟ ನಿವಾರಣೆಗೆ ಸರ್ಕಾರ ಅಗತ್ಯ ನೆರವು ನೀಡುವುದಾಗಿ ಸಚಿವ ರಾಮಲಿಂಗಾರೆಡ್ಡಿ ಅವರು ಭರವಸೆ ನೀಡಿದ್ದರು. ಅಲ್ಲದೇ ಈ ಬಗ್ಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದ್ದರು ಈ ಹಿನ್ನೆಲೆಯಲ್ಲಿ ಹಾಪ್‌ಕಾಮ್ಸ್ 12 ಕೋಟಿ ರು.ಗಳನ್ನು ಬಡ್ಡಿ ಸಹಿತ ಸಾಲವಾಗಿ ಕೊಡುವಂತೆ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ.

ನಿವೃತ್ತಿಯಾಗಿ ಎರಡು ವರ್ಷ ಆಗಿದೆ. ಇದುವರೆಗೂ ಸಂಸ್ಥೆ ನಿವೃತ್ತಿಯ ನಂತರದ ಸವಲತ್ತುಗಳನ್ನು ಕೊಟ್ಟಿಲ್ಲ. ಗ್ರಾಚ್ಯುಟಿ ಕೊಡುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಇಂದು, ನಾಳೆ ಎಂದು ತಿಂಗಳುಗಳನ್ನು ಮುಂದೂಡುತ್ತಲೇ ಬರಲಾಗುತ್ತಿದೆ. ಸರ್ಕಾರ ಹಾಪ್‌ಕಾಮ್ಸ್ ನೆರವಿಗೆ ಬರಬೇಕು. ನಿವೃತ್ತಿಯ ನಂತರವಾದರೂ ಸಿಬ್ಬಂದಿ ನೆಮ್ಮದಿಯಿಂದ ಬದುಕುವಂತೆ ಸಹಕರಿಸಬೇಕೆಂದು ನಿವೃತ್ತ ಸಿಬ್ಬಂದಿಗಳು ಒತ್ತಾಯಿಸಿದ್ದಾರೆ.

Kannada Prabha Pg- 4

Pre-monsoon rain wreaks havoc on crops

Over 9,500 hectares of agricultural crops and 12,000 hectares of horticultural crops have been destroyed. This includes 3,750 hectares of jowar, 1,782 hectares of paddy, 920 hectares of safflower, 843 hectares of bajra, and 711 hectares of wheat crops

Jahnavi T.R.
BENGALURU

The unpredictable rain patterns in the State have heightened the misery of farmers as thousands of hectares of crops were washed away this year by pre-monsoon rains. According to government data, agricultural crops on 9,581.62 hectares of land and horticultural crops on 12,060.86 hectares were lost due to rain between March and May.

Bidar, which often sees periods of drought, has received excessive rainfall this year, thereby facing the worst crop loss. The district received a total of 200 mm rainfall between March and May, which is a 235% departure from normal, according to the database of Karnataka State Natural Disaster Monitoring Centre (KSNDMC). As a result, a total of 5,577 hectares of agricultural crops and 1,292 hectares of horticultural crops were washed away in the district.



Around 7,257 hectares of horticultural crop loss has been witnessed in Kolar district. BHAGYA PRAKASH K.

In Yadgir

Similarly, in Yadgir, where 1,115.73 hectares of agricultural crops were lost, 98 mm rainfall was recorded during pre-monsoon, which was a 62% departure from normal rainfall. These two districts were followed by Davanagere, Raichur and Chitradurga districts which were also majorly affected by agricultural crop loss.

Across the State, 3,750 hectares of jowar, 1,782 hectares of paddy, 920 hectares of safflower, 843.94 hectares of bajra and 711 hectares of wheat crops were destroyed during the pre-monsoon period. "This was the Rabi crop sowing season and the unexpected rains interfered with the farmers' plans. We do not usually see this kind of rainfall in North Karnataka region, let alone hailstorms. As the rainfall was well above the normal amounts this time, we had to see this scale of crop loss," said a senior official in the Department of Agriculture.

A recently retired senior official from the Agriculture Department spoke about the changing climatic conditions that are hampering crops in the State. "There is either drought or floods every alternate year. Both agricultural and horticultural crops are lost either to excess rain or deficit of rain, especially in the northern parts of the State. This year, the changing climactic conditions and the hailstorms were the main factors in the crop loss. However, work has been taken up by both departments and local administrations to provide tertiary compensation to farmers," said the official.

Often having smaller crop cycles than agricultural crops, horticulture farmers bear the brunt of seasonal calamities frequently. Around ₹201.6 crore worth of horticulture crops have been destroyed in the last few months, Horticulture Department officials said.

Seasonal favourite mango and Kolar, the district where it is grown the most, have figured on the top of the crop loss list. Around 7,257 hectares of horticultural crop loss was witnessed in Kolar.

Mangoes on a total of 6,750.5 hectares were lost recently rattling the already struggling mango farmers. This was followed by grapes (1,639.3 hectares), tomato (1,125.89 hectares), banana, papaya, onion, arecanut and pomegranate. The loss of these crops has led to a hike in the prices of fruits and vegetables in Bengaluru.

The Horticulture Department has estimated that according to the guidelines provided by NDRF and SDRF, ₹34.66 crore was needed to provide compensation to the farmers. "Mangoes in Kolar and Bidar have been hit badly, along with a few other crops due to the rain and thunderstorms this year. However, we cannot say that 100% crop loss occurred on all 12,000 hectares. Parts of it could be salvaged," said Rajender Kumar Kataria, Principal secretary, Horticulture Department until Thursday.

Crop loss

Major agricultural crop loss between March and May 2023

Crop	Crop loss (area in hectare)
Jowar	3,750.29
Paddy	1,782.98
Safflower	920.00
Bajra	843.94
Maize	803.05
Wheat	711.00

Districts majorly affected by agricultural crop loss between March and May 2023

District	Crop loss (area in hectare)
Bidar	5,577.00
Yadgir	1,115.73
Davangere	744.61
Raichur	716.00
Chitradurga	510.80

Major horticultural crop loss between March and May 2023

Crop	Crop loss (area in hectare)
Mango	6,750.50
Grapes	1,639.30
Tomato	1,125.89
Banana	651.76
Papaya	225.90

Districts majorly affected by horticultural crop loss between March and May 2023

District	Crop loss (area in hectare)
Kolar	7,257.80
Bagalkot	1,562.40
Bidar	1,292.00
Chickballapur	398.78
Chitradurga	269.07

The Hindu Pg-5

Indian Express Pg-14

Honey collection more than doubles in Sunderbans after pandemic blues

PRANAB MONDAL @ Kolkata

AFTER the massive destruction of the mangroves in Sundarbans by the two cyclones in 2020 and 2021, combined by Covid pandemic, flowers bloomed again in the jungles resulting in a record boom in honey collection from the delta region of Bengal in 2023.

The collection of honey has more than doubled at 38 tonnes compared with last year's 16 tonnes in volume.

"The bee population and beehives were damaged in the cyclones and there were not enough flowers in the mangroves to attract the insects. The situation started improving in 2022 as bees were back in Sunderbans. This year, flowering is much better in the delta region resulting in the four-year record collection," said an official of the West Bengal Forest Development Corporation (WBFDC), the agency in-charge of processing, packaging and selling the honey collected from Sunderbans in the retail market.



Honey collection depends on multiple factors like ideal climate conditions in their natural habitat. The past couple of years have witnessed a severe damage to the ecosystem in Sundarbans but nature has its own way fighting back.

According to foresters, there are several species of bees in Sunderbans and among them, the Apis dorsata type makes more hives and honey. ''The bees fly from the Himalayas in search of these flowers in the mangroves. They are migratory and fly to Indonesia before returning. The recent cyclones had destroyed the habitat of the bees and led to much less flowering,'' said an official of forest department.

Bees that gather nectar from the khalsi flower (Aegiceras corniculatum) are believed to be the source of the best honey in the Sunderbans.

The Sunderbans is the world's largest mangrove delta which is also home to Royal Bengal Tiger. The mangrove jungle is spread across 10,000sq km and a little above 4,000sq km is in West Bengal and the rest is in Bangladesh.

Honey collection takes place for about a month in summer, usually between April and May. The process continues for two weeks to a month.

'Cyclones damaged beehives, bee population'

The bee population and beehives were damaged in the cyclones and there were not enough flowers in the mangroves to attract the insects, said an official of the West Bengal Forest Development Corporation (WBFDC). The situation started improving in 2022.

Pre-monsoon rainfall above normal this year

JITENDRA CHOUBEY @ New Delhi

IN the pre-monsoon season, India has received above-normal rainfall. Significant parts of the country received excess to large excess rainfall, showing impact of climate change. Eastern and north-eastern India, however, registered a deficit. According to scientists, the deficit in eastern India is due to high aerosol concentration in Gangetic plains.

The country has received above the normal rainfall by 12% between March 1 and May 29. Of four homogenous regions in the country, only east and eastern India had deficit rainfall in this pre-monsoon period whereas other three regions received excess rainfall.

Thirteen major states across northern, central and southern India received large excess rainfall. Gujarat received 863% of rain than normal, followed by Madhya Pradesh (348%), Rajasthan(304%), Chhattisgarh (204%), Maharashtra(161%), Uttar Pradesh(128%), Haryana(127%), Punjab(120%).



These states are major producers of cash crops such as cotton, groundnut, and soyabean and food crops such as rice, maize and pulses. Scientists say the above-normal rainfall will help farmers in preparing land for kharif cash crops.

"Farmers will be at an advantage in these states as they can skip a round of irrigation in preparing land for their cash crops," N Chattopadhyay, agri-meteorologist at Indian Meteorological Department (IMD).

Erratic weather acted as truant in most of the north-eastern states and eastern states. There is a deficit of -35% rainfall in this region.

"We noticed that frequency of the heavy rainfall is decreasing in the eastern parts of the country, especially the north-eastern parts, Bihar and Jharkhand," says Dr Mrutunjoy Mohapatra, Director General Meteorology, IMD.

However, there is an increasing trend in the central part such as Gujarat, Odisha and the northern peninsula, he added.

Indian Express Pg-13

ಬಾದಾಮಿ ಪೋಷಕಾಂಶಗಳ ಆಗರ

ಬಾದಾಮಿಯು ಅದ್ಭುತವಾದ ಆರೋಗ್ಯ ಪ್ರಯೋಜನಗಳಿಂದ ಕೂಡಿದೆ. ಇತ್ತೀಚೆಗಂತೂ ಬೆಳಿಗ್ಗೆ ನೆನೆಸಿದ ಬಾದಾಮಿಯನ್ನು ತಿನ್ನುವುದು ರೂಢಿಯಾಗಿ ಬಿಟ್ಟಿದೆ. ಬಾದಾಮಿ ತಿನ್ನುವುದರಿಂದ ಮೆದುಳು ಚುರುಕಾಗುತ್ತದೆ. ಅದಕ್ಕಾಗಿಯೇ ಮಕ್ಕಳ ಪರೀಕ್ಷೆಯ ಸಮಯದಲ್ಲಿ ಬಾದಾಮಿಯನ್ನು ತಪ್ಪದೆ ಕೊಡುತ್ತಾರೆ.





• ಸಮೃದ್ಧ ಪೌಷ್ಟಿಕಾಂಶ

ಒಣ ಬಾದಾಮಿಗೆ ಹೋಲಿಸಿದರೆ, ನೆನೆಸಿದ ಬಾದಾಮಿ ಪೋಷಕಾಂಶಗಳನ್ನು ಬಿಡುಗಡೆ ಮಾಡಲು ಸಹಾಯ ಮಾಡುತ್ತದೆ. ಇದು ಜೀರ್ಣಕ್ರಿಯೆಯ ಪ್ರಕ್ರಿಯೆಗೆ ಒಳ್ಳೆಯದು. ಇದನ್ನು ತಿನ್ನುವುದರಿಂದ ಜ್ಞಾಪಕ ಶಕ್ತಿ ಚುರುಕುಗೊಳ್ಳುತ್ತದೆ ಮತ್ತು ಅನೇಕ ರೀತಿಯ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳ ಲಕ್ಷಣಗಳು ದೂರವಾಗುತ್ತವೆ. ಹಾಗೆಯೇ ವಿಟಮಿನ್ ಇ ಯ ಉತ್ತಮ ಮೂಲವಾಗಿದೆ. ಕೋಶಗಳನ್ನು ಹಾನಿಯಿಂದ ರಕ್ಷಿಸುತ್ತದೆ.

• ಪ್ರೊಟೀನ್ ಮತ್ತು ನಾರಿನ ಪ್ರಮಾಣ

ಇದರಲ್ಲಿರು ಪ್ರೊಟೀನ್ ಮತ್ತು ನಾರಿನಂಶದಿಂದ ದೀರ್ಘಕಾಲದವರೆಗೆ ಹೊಟ್ಟೆ ತುಂಬಿರುತ್ತದೆ ಮತ್ತು ಅನಾರೋಗ್ಯಕರ ವಸ್ತುಗಳನ್ನು ತಿನ್ನುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಇದಲ್ಲದೆ, ಬಾದಾಮಿಯಂತಹ ಬೀಜಗಳನ್ನು ತಿನ್ನುವುದು ಜೀರ್ಣಕ್ರಿಯೆಯನ್ನು ವೇಗಗೊಳಿಸುತ್ತದೆ ಮತ್ತು ದೇಹವು ಕೊಬ್ಬನ್ನು ವೇಗವಾಗಿಕಡಿಮೆಮಾಡುತ್ತದೆ. ಎಂದು ಅನೇಕ ಅಧ್ಯಯನಗಳು ತೋರಿಸುತ್ತವೆ.

• ಕೆಟ್ಟ ಕೊಲೆಸ್ಟಾಲ್ ನಿವಾರಣೆ

ಕೆಟ್ಟ ಕೊಲೆಸ್ಟಾಲ್ ಅನೇಕ ಗಂಭೀರ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಬಾದಾಮಿಯು ಕೆಟ್ಟ ಕೊಲೆಸ್ಟಾಲ್ ಅನ್ನು ನಿಯಂತ್ರಿಸಲು ಮತ್ತು ಆರೋಗ್ಯಕರ ಮಟ್ಟದ ಉತ್ತಮ ಕೊಲೆಸ್ಟಾಲ್‌ನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಇದರಿಂದ ಹೃದಯದ ಆರೋಗ್ಯ ಹೆಚ್ಚುತ್ತದೆ.

• ನೆನೆಸಿದ ಬಾದಾಮಿಯನ್ನು ಏಕೆ ತಿನ್ನಬೇಕು?

ಬಾದಾಮಿಯನ್ನು ನೆನೆಸದೆ, ಸಿಪ್ಪೆ ತೆಗೆಯದೆ ತಿಂದರೆ ರಕ್ತದಲ್ಲಿ ಪಿತ್ತದ ಪ್ರಮಾಣ ಹೆಚ್ಚುತ್ತದೆ. ಬಾದಾಮಿ ಸಿಪ್ಪೆಯಲ್ಲಿ ಟ್ಯಾನಿನ್ ಇರುತ್ತದೆ. ಇದನ್ನು ಖಾಲಿ ಹೊಟ್ಟೆಯಲ್ಲಿ ತಿನ್ನುವುದರಿಂದ ನಾವು ಅನೇಕ ಆರೋಗ್ಯ ಪ್ರಯೋಜನಗಳನ್ನು ಪಡೆಯುತ್ತೇವೆ. ದೇಹಕ್ಕೆ ಬೇಕಾಗಬಹುದಾದ ವಿಟಮಿನ್‌ಗಳು, ಖನಿಜಗಳು, ರೋಗ ನಿರೋಧಕಗಳು, ಆರೋಗ್ಯಕರ ಕೊಬ್ಬು ಇತ್ಯಾದಿಗಳು ಸಮೃದ್ಧವಾಗಿದೆ. ಹಸಿ ಬಾದಾಮಿಗಿಂತ ನೆನೆಸಿದ ಬಾದಾಮಿ ಸುಲಭವಾಗಿ ಜೀರ್ಣವಾಗುತ್ತದೆ. ನೆನೆಸಿದ ಬಾದಾಮಿ ಕೂಡ ಜೀರ್ಣಕ್ರಿಯೆಯನ್ನು ಉತ್ತೇಜಿಸುತ್ತದೆ. ಇದು ಪೋಷಕಾಂಶಗಳನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ.

Vishwavani spl Pg-2

ಸೈಕ್ಲೋನ್‌ನಿಂದ ಕೃಷಿಗೆ ಕಂಟಕ ಆಹಾರ ಉತ್ಪಾದನೆ ಕುಂಠಿತ

■ ಹರೀಶ್ ಬೇಲೂರು ಬೆಂಗಳೂರು

ಅರಬ್ಬಿ ಸಮುದ್ರ ಹಾಗೂ ಬಂಗಾಳ ಕೊಲ್ಲಿಯಲ್ಲಿ ಪ್ರತಿ ವರ್ಷ ಉಂಟಾಗುವ ಸೈಕ್ಲೋನ್ ನಿಂದ ಅನುಕೂಲವಾಗಬೇಕಿದ್ದ ರೈತರಿಗೆ ಹೆಚ್ಚಾಗಿ ಕಂಟಕವಾಗುತ್ತಿದೆ. ಇದರಿಂದ ವರ್ಷದಿಂದ ವರ್ಷಕ್ಕೆ ಆಹಾರ ಉತ್ಪಾದನೆ ಕುಂಠಿತವಾಗುತ್ತಿದೆ.

ವಿಶೇಷವಾಗಿ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲೇ ರೂಪುಗೊಳ್ಳುವ ಚಂಡಮಾರುತದಿಂದ ಕೃಷಿ ಕ್ಷೇತ್ರದ ಮೇಲೆ ಹೆಚ್ಚಾಗಿ ಪರಿಣಾಮ ಬೀರುವಂತಾಗಿದೆ. ಕಟಾವಿಗೆ ಬಂದಿರುವ ವಿವಿಧ ಬೆಗೆಯ ಶೇ. 75 ಬೆಳೆಗಳು ಹಾಳಾಗುತ್ತಿವೆ. ಅಲ್ಲದೆ, ಮುಂಗಾರು ಪೂರ್ವ ಅವಧಿಯಲ್ಲಿ ಉಂಟಾಗುವ ಚಂಡಮಾರುತದಿಂದ ಮುಂಗಾರು ಮಾರುತಗಳ ಆಗಮನದ ಮೇಲೆ ಪರಿಣಾಮ ಬೀರುತ್ತಿದೆ. ಇದರಿಂದ ತಡವಾಗಿ ಮಾರುತಗಳ ಆಗಮನದಿಂದ ಕೃಷಿ ಚಟುವಟಿಕೆಗಳಿಗೂ ಹಿನ್ನಡೆ ಉಂಟಾಗುತ್ತಿದೆ.

ಮುಂಗಾರು ಪೂರ್ವದಲ್ಲಿ ಬೀಳುವ ಮಳೆಯಿಂದಾಗಿ ದಕ್ಷಿಣ ಕರ್ನಾಟಕ ಭಾಗದ ಬಹುತೇಕ ಜಿಲ್ಲೆಗಳಲ್ಲಿ ಜಮೀನು ಹದ ಮಾಡುವ ಕಾರ್ಯ ನಡೆಯುತ್ತದೆ. ಬಳಿಕ, ವಾಡಿಕೆಯಂತೆ ಜೂನ್ ಮೊದಲ ವಾರ ಅಥವಾ ವಾಡಿಕೆಗಿಂತ ಮುನ್ನ ನೈಋತ್ಯ ಮಾನ್ಸೂನ್ (ಮುಂಗಾರು ಮಳೆ) ಆಗಮನವಾದರೆ ಬಿತ್ತನೆ ಕಾರ್ಯ ಶುರುವಾಗುತ್ತದೆ. ಆದರೆ, ಮುಂಗಾರು ಪೂರ್ವದಲ್ಲಿ ಉಂಟಾಗುವ ಚಂಡಮಾರುತದಿಂದ ತೇವಾಂಶ ಕೊರತೆ, ಗಾಳಿ ವೇಗ ಇಲ್ಲದಿರುವುದು ಹಾಗೂ ತೇವಾಂಶ ಭರಿತ ಮೋಡಗಳನ್ನು ಸೆಳೆದುಕೊಳ್ಳುವುದು ಸೇರಿ ವಿವಿಧ ಕಾರಣಗಳಿಂದ ವಾಡಿಕೆಯಂತೆ ಆಗಮನವಾಗಬೇಕಿದ್ದ ಮಾರುತಗಳ ಮೇಲೆ ಪರಿಣಾಮ ಬೀರುತ್ತದೆ. ಮಾರುತಗಳ ಆಗಮನವಾದರೂ ದುರ್ಬಲಗೊಂಡು ಅಷ್ಟಾಗಿ ಮಳೆ ಸುರಿಯುವುದಿಲ್ಲ.

» ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲೇ ಸಂಕಷ್ಟ

ಫಸಲು ಬೆಳೆಗಳು ಹಾಳು: ಮುಂಗಾರು ಸಂದರ್ಭದಲ್ಲಿ ಸ್ವಲ್ಪ ಬೀಳುವ ಮಳೆಯಿಂದ ಬಿತ್ತನೆ ಬೀಜ ಬಿತ್ತುವ ರೈತರು ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ (ಈಶಾನ್ಯ ಮಾನ್ಸೂನ್-ಹಿಂಗಾರು ಮಳೆ) ಫಸಲಿಗೆ ಬರುವ ಬೆಳೆಗಳನ್ನು ಕೂಯ್ಲು ಮಾಡಲು ಸಿದ್ಧತೆ ನಡೆಸುತ್ತಾರೆ. ಆದರೆ, ಈ ಸಂದರ್ಭದಲ್ಲಿ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಸಂಭವಿಸುವ ಸೈಕ್ಲೋನ್‌ನಿಂದಲೇ ಫಸಲಿಗೆ ಬಂದಿರುವ ರಾಗಿ, ಜೋಳ, ಭತ್ತ, ಈರುಳ್ಳಿ, ಕಾಫಿ, ಅಡಕೆ, ಕಾಳುಮೆಣಸು, ಬಾಳೆ, ಪಪ್ಪಾಯಿ, ಆಲೂಗಡ್ಡೆ, ಮೆಣಸಿನಕಾಯಿ, ಹೆಸರು, ಗೋವಿನ ಜೋಳ, ಶೇಂಗಾ ಹಾಗೂ ಹತ್ತಿ ಸೇರಿ ವಿವಿಧ ಬೆಳೆಗಳು ಹಾಳಾಗುತ್ತವೆ.



10 ವರ್ಷಗಳಲ್ಲಿ 40 ಬಾರಿ ಚಂಡಮಾರುತ

2011ರಿಂದ 2020ರವರೆಗೆ 40 ಬಾರಿ ಸೈಕ್ಲೋನ್ ಆಗಿದೆ. 2019ರಲ್ಲಿ ಅತಿ ಹೆಚ್ಚು 8 ಬಾರಿ ಸೈಕ್ಲೋನ್ ರೂಪುಗೊಂಡಿದೆ. 2011 ಮತ್ತು 2012ರಲ್ಲಿ ತಲಾ 2 ಬಾರಿ, 2013ರಲ್ಲಿ 5 ಬಾರಿ, 2014ರಲ್ಲಿ 3 ಬಾರಿ, 2015ರಲ್ಲಿ 4 ಬಾರಿ, 2016ರಲ್ಲಿ 4 ಬಾರಿ, 2017ರಲ್ಲಿ 3 ಬಾರಿ ಹಾಗೂ 2020ರಲ್ಲಿ 2 ಬಾರಿ ಸೈಕ್ಲೋನ್ ಸಂಭವಿಸಿದೆ. ಭಾರತ ಅಂದಾಜು 7,516 ಕಿಮೀ ಉದ್ದದ ಕರಾವಳಿ ಪ್ರದೇಶ ಹೊಂದಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಅಂದಾಜು 32 ಕೋಟಿ ಜನರು ಸೈಕ್ಲೋನ್ ಸಂಬಂಧಿತ ಅಪಾಯಗಳಿಗೆ ತುತ್ತಾಗುತ್ತಿದ್ದಾರೆ. ಕರ್ನಾಟಕದಲ್ಲಿ ಅಂದಾಜು 320 ಕಿಮೀ ಕರಾವಳಿ ಪ್ರದೇಶವಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಅರಬ್ಬಿ ಸಮುದ್ರ ಗಡಿ ಇದೆ. ಕರಾವಳಿ ಮತ್ತು ಪಕ್ಕದ ಪ್ರದೇಶಗಳಲ್ಲಿ ಸೈಕ್ಲೋನ್‌ನಿಂದ ಅಪಾಯ ಹೆಚ್ಚಾಗಿದೆ. ಪ್ರತಿ ವರ್ಷ ಪ್ರಪಂಚದಾದ್ಯಂತ 80 ಚಂಡಮಾರುತಗಳು ರೂಪುಗೊಳ್ಳುತ್ತವೆ. ಈಶಾನ್ಯ ಮಾರುತ ಸಂದರ್ಭದಲ್ಲಿ ರಾಜ್ಯದಲ್ಲಿ ಸೈಕ್ಲೋನ್‌ನಿಂದ ಹೆಚ್ಚು ಅಪಾಯವಾಗುತ್ತಿದೆ. 2011ರಿಂದ 2020ರವರೆಗೆ 25 ಬಾರಿ ಅರಬ್ಬಿ ಸಮುದ್ರದಲ್ಲಿ ಹಾಗೂ 15 ಬಾರಿ ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ರೂಪುಗೊಂಡಿದೆ. ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ 26 ಬಾರಿ ಸೈಕ್ಲೋನ್ ಉಂಟಾಗಿದೆ.

ದಕ್ಷಿಣ ರಾಜ್ಯಗಳಲ್ಲಿ ಮಳೆಗಾಲ

ಅಕ್ಟೋಬರ್ 1ರಿಂದ ಡಿಸೆಂಬರ್ 31ರವರೆಗಿನ ಅವಧಿಯನ್ನು ಈಶಾನ್ಯ ಮಾರುತವೆಂದು ಕರೆಯಲಾಗುತ್ತದೆ. ಈಶಾನ್ಯ ಮಾರುತ ದಕ್ಷಿಣ ರಾಜ್ಯಗಳಲ್ಲಿ ಪ್ರಧಾನ ಮಳೆಗಾಲವಾಗಿದೆ. ಕರಾವಳಿ ಆಂಧ್ರಪ್ರದೇಶ, ರಾಯಲಸೀಮಾ, ತಮಿಳುನಾಡು, ಪಾಂಡಿಚೇರಿಗೆ ಉತ್ತಮ ಮಳೆ ತರಲಿದೆ. ತಮಿಳುನಾಡಿಗೆ ವಾರ್ಷಿಕ ಒಟ್ಟು ಮಳೆಯಲ್ಲಿ ಶೇ. 48 ಮಳೆ ಈಶಾನ್ಯ ಮಾರುತದಿಂದ ಆಗುತ್ತದೆ. ದಕ್ಷಿಣ ಕರ್ನಾಟಕ ಭಾಗದ ಬೆಂಗಳೂರು, ಬೆಂ.ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಇತರ ಜಿಲ್ಲೆಗಳ ವಾರ್ಷಿಕ ಒಟ್ಟು ಮಳೆಯಲ್ಲಿ ಶೇ. 30 ಈಶಾನ್ಯ ಮಾರುತದಿಂದ ಉಂಟಾಗುತ್ತದೆ. ದಕ್ಷಿಣ ಒಳನಾಡಿನಲ್ಲಿ ಒಟ್ಟು ವಾರ್ಷಿಕ ಮಳೆ 1,019 ಮಿಮೀ ಇದ್ದು, ಇದರಲ್ಲಿ 210 ಮಿಮೀ ಮಳೆ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಬೀಳುತ್ತದೆ. ಇದರಲ್ಲಿ ಅಕ್ಟೋಬರ್‌ನಲ್ಲಿ ಅತಿ ಹೆಚ್ಚು ಅಂದರೆ ಅಂದಾಜು 171 ಮಿಮೀ ಮಳೆ ಸುರಿಯಲಿದೆ ಎಂದು ರಾಜ್ಯ ಹವಾಮಾನ ಇಲಾಖೆ ಅಂದಾಜಿಸಿದೆ.

ಈಶಾನ್ಯ ಮಾನ್ಸೂನ್‌ನಲ್ಲೇ ಹೆಚ್ಚು

ಫೆಸಿಫಿಕ್ ಸಾಗರ ಉದ್ದ, ವಿಶಾಲ ಮತ್ತು ಆಳವಾಗಿದೆ. ಸೈಕ್ಲೋನ್ ಬಲಗೊಳ್ಳುವುದಕ್ಕೆ ಶಕ್ತಿ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಈಶಾನ್ಯ ಮಾನ್ಸೂನ್ ಸಂದರ್ಭದಲ್ಲಿ ಹೆಚ್ಚು ಸೈಕ್ಲೋನ್‌ಗಳು ಉಂಟಾಗುತ್ತವೆ. ಫೆಸಿಫಿಕ್ ಸಾಗರದಂತೆ ಅರಬ್ಬಿ ಸಮುದ್ರ ಅಷ್ಟೊಂದು ವಿಶಾಲ ಮತ್ತು ಆಳ ಇಲ್ಲ. ಇದರಿಂದಾಗಿ ಸೈಕ್ಲೋನ್ ರೂಪುಗೊಳ್ಳಲು ಅಷ್ಟೊಂದು ಶಕ್ತಿ ಸಿಗುವುದಿಲ್ಲ. ಆದ್ದರಿಂದ, ನೈಋತ್ಯ ಮಾನ್ಸೂನ್‌ಗಿಂತ ಈಶಾನ್ಯ ಮಾನ್ಸೂನ್ ಅವಧಿಯಲ್ಲಿ ಹೆಚ್ಚು ಸೈಕ್ಲೋನ್‌ಗಳು ರೂಪುಗೊಳ್ಳುತ್ತವೆ. ರಾಜ್ಯದಲ್ಲಿ ವಾರ್ಷಿಕವಾಗಿ 1,150 ಮಿಮೀ ಮಳೆಯಾಗುತ್ತದೆ. ಶೇ. 73 ಮುಂಗಾರು, ಶೇ.15 ಹಿಂಗಾರು ಹಾಗೂ ಶೇ.10 ಮುಂಗಾರು ಪೂರ್ವ ಮಳೆಯಾಗುತ್ತದೆ. ದಕ್ಷಿಣ ಕರ್ನಾಟಕ ಜಿಲ್ಲೆಗಳಲ್ಲಿ ವಾರ್ಷಿಕ ಒಟ್ಟು ಮಳೆಯಲ್ಲಿ ಶೇ. 30 ಈಶಾನ್ಯ ಮಾರುತದಿಂದ ಸುರಿಯುತ್ತದೆ.

Vijayavani Pg-8

ಉದಯಕಾಲ
ಬೆಂಗಳೂರು, ಶುಕ್ರವಾರ, ಜೂನ್ 2, 2023

ಆಧುನಿಕ ಭಾರತ ನಿರ್ಮಾಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪಾತ್ರ ಅಪಾರ: ಡಾ.ರಾಜೇಂದ್ರ ಚೆನ್ನಿ

ಉದಯಕಾಲ ನ್ಯೂಸ್

ಬೆಂಗಳೂರು: ಆಧುನಿಕ ಭಾರತ ನಿರ್ಮಾಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರ ಪಾತ್ರ ಅಪಾರವಾಗಿದ್ದು, ಭೀಮೋತ್ಸವ ದಿನಾಚರಣೆಯು ಅವರಿಗೆ ಕೋಟಿನುವ ಕೃತಜ್ಞತೆಯಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ರಾಜೇಂದ್ರ ಚೆನ್ನಿ ಅವರು ತಿಳಿಸಿದ್ದಾರೆ.

ಇಂದು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ಸಂಘ ಮತ್ತು ನೌಕರರ ಸಂಘದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಮಹಾನ್ ಮಾನವತಾವಾದಿ "ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮ ದಿನಾಚರಣೆ-ಭೀಮೋತ್ಸವ - 2023ನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಜಾಪ್ರಭುತ್ವದ ಮೂಲ ಆಶಯವೆಂದರೆ ಸಮಾನ ಸಮಾಜದ ರಚನೆ, ಜೀವನ ಪದ್ಧತಿಯಾಗಿದೆ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು ಜನಸಾಮಾನ್ಯರಿಗೆ ಪೂರಕವಾಗುವಂತೆ ಕಲುಪಿಸುವುದು ಅತ್ಯವಶ್ಯಕ ಎಂದರು.

ಡಾ. ಬಿ.ಆರ್. ಅಂಬೇಡ್ಕರ್‌ರವರು ಯಾವುದೇ ಜಾತಿ ಪಂಗಡ, ಪ್ರಾಂತ್ಯಕ್ಕೆ ಸೀಮಿತರಲ್ಲ, ಸಂವಿಧಾನದ



ರಚನೆಗೆ ಸೀಮಿತವಾದ ಮಹಿಳೆಯರ ಪಂಗೆಯರ ಜಾವಧಿ, ಕಾರ್ಮಿಸಿಗಳ ಕೆಲಸದ ಅವಧಿಗೆ ಶ್ರಮಿಸಿದ್ದಾರೆ. ಜನ್ಮದಿಂದ ಬಂದ ಸೂತ್ರಕಗಳನ್ನು ಬಿಟ್ಟು ಸಮುದಾಯದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಪ್ರಬಲವಾಗಬೇಕು ಆಗ ಮಾತ್ರ ಸಮ - ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕದ ದಲಿತ್ ಇಂಡಿಯನ್ ಚೇಂಬರ್ ಆಫ್ ಕಾರ್ಮಸ್ ಅಂಡ್ ಇಂಡಸ್ಟ್ರೀ ಅಧ್ಯಕ್ಷರಾದ ಡಾ. ರಾಜು ನಾಯಕ್, 2021ರ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ನೀಡುವ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಸ್ವೀಕರಿಸಿ ಯುವಜನತೆ ಕೆಲಸ ನೀಡುವವರು ಆಗಬೇಕೆ ಹೊರತು ಪಡೆಯುವವರು ಆಗಬಾರದು. ಸರ್ಕಾರದಿಂದ ದೊರೆಯುವ ಸವಲತ್ತುಗಳ ಬಗ್ಗೆ ಅವರು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್.ವಿ. ಸುರೇಶ, ಮಾಕನಾಡಿ, ಸಂವಿಧಾನ ಪ್ರಜಾಪ್ರಭುತ್ವದ ತಳಪಾದಿ. ಪ್ರತಿಯೊಬ್ಬ ನಾಗರೀಕ ಸಂವಿಧಾನದ ಸಾರಾಂಶಗಳನ್ನು ತಿಳಿದು ವ್ಯವಸ್ಥೆಗೆ ಪೂರಕವಾಗಿ ಸಮ ಸಮಾಜದ ನಿರ್ಮಿಸುವುದು ಅದ್ಯ ಕರ್ತವ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷಣ ನಿರ್ದೇಶಕರಾದ ಡಾ.ಕೆ.ಸಿ.ನಾರಾಯಣಸ್ವಾಮಿ, ಕುಲಸಚಿವರಾದ ಡಾ. ಬಸವೇಗೌಡ, ವಿಸ್ತರಣಾ ನಿರ್ದೇಶಕರಾದ ಡಾ. ಪಿ.ಎಲ್. ಮಧುಪ್ರಸಾದ್, ಡೀನ್ ಡಾ. ಜೆಕ್. ಸಿ. ಪ್ರಕಾಶ್, ಡಾ. ಎನ್.ಬಿ. ಪ್ರಕಾಶ್, ನಿರ್ದೇಶಕರಾದ ಡಾ. ಎಸ್. ಚಂದ್ರಶೇಖರ್, ಡಾ. ಬಿ.ಆರ್. ಅಂಬೇಡ್ಕರ್ ಸಂಘ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ఈనాడు
శుక్రవారం జూన్ 2, 2023

ప్రత్యామ్నాయ పంటలతో లాభాలు

బెంగళూరు (యశ్వంతపుర), న్యూస్‌టుడే: పొగాకు పండించే రైతులను ప్రత్యామ్నాయ పంటల వైపు మళ్లించే విధంగా ప్రోత్సాహించాలని బెంగళూరు వ్యవసాయ విశ్వవిద్యాలయం ఉపకులపతి డాక్టర్ ఎస్.వి.సురేశ్ అభిప్రాయపడ్డారు. ప్రపంచ పొగాకు రహిత దినోత్సవాన్ని పురస్కరించుకొని జీకేవీకేలో ఏర్పాటు చేసిన కార్యక్రమాన్ని ప్రారంభించారు. ఈ సందర్భంగా ఆయన మాట్లాడుతూ పొగాకు పండించే 10వేల మంది రైతులను ప్రత్యామ్నాయ పంటలు సాగు చేసే విధంగా తాము ప్రోత్సాహిస్తున్నామని, పొగాకు ఉత్పత్తుల వల్ల నేటి యువత శరీరికంగా శక్తిహీనులవుతున్నారని ఆందోళన వ్యక్తం చేశారు. ప్రముఖ సినీదర్శకుడు సురేష్ హెబ్లికర్ మాట్లాడుతూ అత్యాశవల్ల పరిసరాలు, ప్రకృతి నాశనమవుతోందన్నారు. పడమటి కనుముల నుంచి 11 నదులు ప్రవహిస్తున్న రాష్ట్రంలో లక్షల సంఖ్యలో మెట్టభూములు ఉన్నట్లు గుర్తు చేశారు. నిమ్హాన్స్ ఆసుపత్రి డైరెక్టర్ డాక్టర్ ప్రతిమా మూర్తి మాట్లాడుతూ పొగాకు వినియోగం వల్ల పలురకాల వ్యాధులకు సోకుతాయని హెచ్చరించారు. కార్యక్రమంలో ఆచార్య సోమశేఖర్, డాక్టర్ అలెగ్జాండర్ థామస్, మనీష్ కుమార్, డాక్టర్ కేసీ నారాయణస్వామి, డాక్టర్ ప్రకాశ్, డాక్టర్ మధుప్రసాద్ తదితరులు పాల్గొన్నారు.



కార్యక్రమాన్ని ప్రారంభిస్తున్న ఉపకులపతి డాక్టర్ సురేష్